**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

## ಸಿ.ಸಿ.ನಂ. 263/2018

| | | |
|---|---|---|
| ಸಾಕ್ಷಿದಾರರ ಹೆಸರು | : | ಎಂ. ಬಸವರಾಜು |
| ತಂದೆಯ ಹೆಸರು | : | ಮರೀಗೌಡ |
| ವಯಸ್ಸು | : | 56 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಹಿರೇಹಳ್ಳಿ ಬಿ. ಕಾಲೋನಿ ಗ್ರಾಮ, ಹೆಚ್.ಡಿ. ಕೋಟೆ ತಾ. |

**<u>ಸಾಕ್ಷಿಯನ್ನು ದಿನಾಂಕಃ 28.11.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ</u>**

ಆರೋಪಿಗಳು ನನಗೆ ಪರಿಚಯ. 5 ನೇ ಆರೋಪಿ ನನ್ನ ದೊಡ್ಡಪ್ಪನ ಮಗ. ದಿನಾಂಕಃ 20.03.2017 ರಂದು ಬೆಳಿಗ್ಗೆ ಸುಮಾರು 11.00 ಗಂಟೆಯ ನಂತರ ನಮ್ಮ ಜಮೀನಿನಲ್ಲಿ ಬಾಳೆ ಗಿಡವನ್ನು ನೆಡುತ್ತಿದ್ದೆವು ನಂತರ ತಿಂಡಿ ಮಾಡುವ ಸಲುವಾಗಿ ಮನೆಗೆ ಬರುತ್ತಿದ್ದಾಗ ತಕರಾರು ಇರುವ ನಮ್ಮ ತಾತನ ಜಮೀನಿನಲ್ಲಿ 1 ರಿಂದ 4, 6 ಮತ್ತು 7 ನೇ ಆರೋಪಿಗಳು ಮರವನ್ನು ತುಂಡು ಮಾಡುತ್ತಿದ್ದರು. ಆಗ ನಾನು ಅವರ ಬಳಿ ಹೋಗಿ 1 ನೇ ಆರೋಪಿಯನ್ನು ಉದ್ದೇಶಿಸಿ ನಾನು ಈಗಾಗಲೇ ತಕರಾರು ಇರುವ ವಿಷಯವನ್ನು ತಿಳಿಸಿದ್ದರು ಏಕೆ ಈ ರೀತಿ ಮಾಡುತ್ತಿದ್ದೀರಾ ಎಂದು ಕೇಳಿದಾಗ ಅದಕ್ಕೆ 1 ನೇ ಆರೋಪಿ ನೀನ್ಯಾರು ಬೋಳೀಮಗನೇ ನಾನು ನಾಗರಾಜೇಗೌಡನಿಗೆ ಹಣ ಕೊಟ್ಟಿದ್ದೇನೆ ಎಂದು ಹೇಳಿ ಮರ ತುಂಡು ಮಾಡುವ ಯಂತ್ರವನ್ನು ನನ್ನ ಕುತ್ತಿಗೆ

ಬಳಿ ಹಿಡಿದು ತಳ್ಳಿರುತ್ತಾನೆ. ಆಗ ನಾನು ತಿಂಡಿ ಮಾಡಿರಲಿಲ್ಲವಾದ್ದರಿಂದ ಮನೆಗೆ ಬರಲು ಹೊರಟಿರುವಾಗ ತುಂಡು ಮಾಡಿರುವ ಮರಗಳನ್ನು ಟ್ರಾಕ್ಟರ್ ತೆಗೆದುಕೊಂಡು ಹೋಗಿ ಹಗ್ಗದಿಂದ ಕಟ್ಟುತ್ತಿದ್ದರು. ಆಗ ನಾನು ಮನೆಗೆ ಬಂದು ನನ್ನ ಮಗನ ಬಳಿ ಮರ ತುಂಡು ಮಾಡಿ ಹಗ್ಗದಿಂದ ಕಟ್ಟುತ್ತಿದ್ದ ವಿಚಾರವನ್ನು ತಿಳಿಸಿದಾಗ ನನ್ನ ಮಗ ತನ್ನ ತಾತನ ಜಮೀನಿನಲ್ಲಿ ಏಕೆ ಮರ ತುಂಡು ಮಾಡಿ ತುಂಬುತ್ತಿದ್ದಾರೆಂದು ಕೇಳಲು ಹೋಗಿರುತ್ತಾನೆ ಮತ್ತು ನನ್ನ ಮಗನ ಜೊತೆ ನಾನು ಮತ್ತು ನನ್ನ ಹೆಂಡತಿ ಕೂಡ ಹೋಗಿರುತ್ತೇವೆ. ಆಗ ನಾವು ನನ್ನ ಮಗನ ಹೆಗಲ ಮೇಲೆ ಕೈ ಹಾಕಿ ನಿನಗ್ಯಾಕೆ ಬೇಡ ಬಾ ಎಂದು ಕರೆದುಕೊಂಡು ಬರುವಾಗ 1 ನೇ ಆರೋಪಿ ಮತ್ತು ಅವರ ಮನೆಯವರು ನಮ್ಮನ್ನು ಅಡ್ಡಗಟ್ಟಿದ್ದು, 5 ನೇ ಆರೋಪಿ ಬೈಕ್ ನಿಂದ ಬಂದು ದೊಣ್ಣೆ ಮತ್ತು ಮಚ್ಚನ್ನು ತೆಗೆದುಕೊಂಡು, ಮಚ್ಚಿನ ಹಂಡಿಯಿಂದ ನನ್ನ ಹೆಂಡತಿಯ ಭುಜ ಮತ್ತು ಕೈಗೆ ಹೊಡೆದಿದ್ದರಿಂದ ನನ್ನ ಹೆಂಡತಿಯ ಕೈ ತುಂಡಾಗಿರುತ್ತದೆ ಮತ್ತು ನನ್ನ ಹೆಂಡತಿ ಅಲ್ಲಿಯೇ ಬಿದ್ದಿರುತ್ತಾರೆ. ಆ ಸಂದರ್ಭದಲ್ಲಿ 5 ನೇ ಆರೋಪಿ ದೊಣ್ಣೆಯಿಂದ ನನ್ನ ತಲೆಗೆ ಹೊಡೆದಿರುತ್ತಾರೆ. 2 ರಿಂದ 4 ನೇ ಆರೋಪಿಗಳು ನಿನ್ನನ್ನು ಮುಗಿಸುತ್ತೇವೆಂದು ಹೇಳಿರುತ್ತಾರೆ. ಅದೇ ರೀತಿ ದೊಣ್ಣೆಯಿಂದ 5 ನೇ ಆರೋಪಿ ನನ್ನ ಹೆಂಡತಿಯ ಎಡ ಭುಜಕ್ಕೆ ಹೊಡೆದಿರುತ್ತಾರೆ. ದೊಣ್ಣೆಯಿಂದ ನನಗೆ ಹೊಡೆದಿದ್ದರಿಂದ ನನ್ನ ತಲೆಯಲ್ಲಿ ರಕ್ತ ಬಂದಿರುತ್ತದೆ. ಗಲಾಟೆ ಸಂದರ್ಭದಲ್ಲಿ ನನಗೆ ಮತ್ತು ನನ್ನ ಹೆಂಡತಿಗೆ ಹೊಡೆದಿದ್ದು, ನನ್ನ ಮಗನಿಗೆ ಸಣ್ಣ-ಪುಟ್ಟ ಗಾಯಗಳಾಗಿರುತ್ತವೆ. ಆಗ ಚಾಸಾ-8 ಮತ್ತು ನಾಗರಾಜುರವರು ಗಲಾಟೆ ಬಿಡಿಸಿರುತ್ತಾರೆ. ನಂತರ ನಾವು ನಮ್ಮ ಮನೆಗೆ ಬಂದು ನಾನು, ನನ್ನ ಹೆಂಡತಿ ಮತ್ತು ಮಗ ಸಾರ್ವಜನಿಕ ಆಸ್ಪತ್ರೆಗೆ

ಬಂದಿರುತ್ತೇವೆ. ನಾನು ಆಸ್ಪತ್ರೆಯಲ್ಲಿರುವಾಗ ಪೋಲೀಸರು ಆಸ್ಪತ್ರೆಗೆ ಬಂದು 01 ಖಾಲಿ ಹಾಳೆಗೆ ಸಹಿ ಮಾಡುವಂತೆ ಕೇಳಿದರು ಆಗ ನಾನು ಖಾಲಿ ಹಾಳೆಗೆ ಸಹಿ ಮಾಡುವುದಿಲ್ಲವೆಂದು ಹೇಳಿದಾಗ ಮಹದೇವಪ್ಪ ಎಂಬ ಪೋಲೀಸರು ನಿಮ್ಮ ಕೇಸನ್ನು ಮಾಡಿಕೊಡುವ ಜವಾಬ್ದಾರಿ ನನ್ನದು ಎಂದು ಹೇಳಿರುತ್ತಾರೆ. ಆಗ ನಾನು ಖಾಲಿ ಹಾಳೆಗೆ ಸಹಿ ಮಾಡಿ ಕೊಟ್ಟಿರುತ್ತೇನೆ. ನಾನು ಸಾರ್ವಜನಿಕ ಆಸ್ಪತ್ರೆಯಿಂದ ಹೆಚ್ಚಿನ ಚಿಕಿತ್ಸೆಗಾಗಿ ಕೆ.ಆರ್. ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ನಂತರ ಸದರಿ ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಕೆ.ಆರ್. ಆಸ್ಪತ್ರೆಯವರು ನೀಡಿದ್ದ ದಾಖಲೆಗಳನ್ನು ಪೋಲೀಸರಿಗೆ ತೋರಿಸಿ ಈ ರೀತಿ ನನ್ನ ಹೆಂಡತಿಗೆ ಕೈ-ಮೂಳೆ ಮುರಿದಿರುತ್ತದೆ ಮತ್ತು ನನಗೆ ಸ್ವಲ್ಪ ಗಾಯವಾಗಿರುತ್ತವೆ, ಪ್ರಕರಣ ದಾಖಲಿಸಿ ಎಂದು ಕೇಳಿರುತ್ತೇವೆ. ಆಗ ಪೋಲೀಸರು ಪ್ರಕರಣ ದಾಖಲಿಸುತ್ತೇವೆ ಬಿಡಿ ಎಂದು ಹೇಳಿರುತ್ತಾರೆ. ನಂತರ ಪೋಲೀಸರು ನನ್ನನ್ನು ವಿಚಾರಿಸಿ ಯಾವುದೇ ಹೇಳಿಕೆ ಪಡೆದಿಲ್ಲ. ನನಗೆ ಮತ್ತು ನನ್ನ ಹೆಂಡತಿಗೆ ಹಲ್ಲೆ ಮಾಡಿದ ಮಚ್ಚು ಮತ್ತು ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ.

**ಈ ಹಂತದಲ್ಲಿ ಸ್ವತ್ತುಗಳನ್ನು ಹಾಜರುಪಡಿಸಲು ಸಲುವಾಗಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮುಂದಿನ ಮುಖ್ಯ ವಿಚಾರಣೆಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**